ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY

Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ/341/2019-20** **ದಿನಾಂಕ: 23.07.2019.**

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 19.07.2019 ರಂದು ಜರುಗಿದ 2ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **19.07.2019** ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ 2ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
23/7/19

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ/241/2019–20 ದಿನಾಂಕ: 23.07.2019.

ದಿನಾಂಕ 19.07.2019 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 2ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎನ್. ನರಸಿಂಹಮೂರ್ತಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರ ಕುಮಾರ್, | ಸದಸ್ಯರು |
| 6. | ಡಾ: ಎಸ್. ಹರೀಶ್, | ಸದಸ್ಯರು |
| 7. | ಡಾ: ಅಶಾ ಗಣೇಶ್, | ಸದಸ್ಯರು |
| 8. | ಪ್ರೊ: ಎನ್. ಚಂದ್ರಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. | ಪ್ರೊ: ವಿ. ಶಿವರಾಂ ಕುಲಸಚಿವರು, | ಸದಸ್ಯ ಕಾರ್ಯದರ್ಶಿಗಳು |

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ನೂತನ ಕುಲಸಚಿವರಾಗಿ ದಿನಾಂಕ 05.07.2019 ರಂದು ವರದಿ ಮಾಡಿಕೊಂಡಿರುವ ಬೆಂಗಳೂರು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ: ವಿ. ಶಿವರಾಂ ಅವರನ್ನು ಸಭೆಗೆ ಪರಿಚಯಿಸಿದರು. ಹಾಗೂ ದಿನಾಂಕ 15.07.2019 ರಂದು ಹಣಕಾಸು ಅಧಿಕಾರಿಗಳಾಗಿ ಸರ್ಕಾರದಿಂದ ನಿಯೋಜನೆ ಮೇಲೆ ವರದಿ ಮಾಡಿಕೊಂಡಿರುವ, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ವಿ.ಡಿ. ನಿಶ್ಚಿತ್, ರವರನ್ನು ಸಭೆಗೆ ಅಹ್ವಾನಿಸಿ, ಕುಲಪತಿಗಳು ಸಿಂಡಿಕೇಟ್ ಸಭೆಗೆ ಪರಿಚಯಿಸಿದರು. ಆನಂತರ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು. ಸಿಂಡಿಕೇಟ್ ಸದಸ್ಯರು ಇಬ್ಬರೂ ಅಧಿಕಾರಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಈ ಇಬ್ಬರು ಅಧಿಕಾರಿಗಳನ್ನು ನೇಮಕ ಮಾಡಿರುವುದಕ್ಕೆ ಕುಲಪತಿಗಳು ಕರ್ನಾಟಕ ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿ ಈ ನೇಮಕಗಳಿಂದ ವಿಶ್ವವಿದ್ಯಾಲಯದ ಆಡಳಿತದ ಹಾಗೂ ಹಣಕಾಸಿನ ನಿರ್ವಹಣೆಗೆ ಅನುಕೂಲವಾಗಲಿದೆ ಎಂದು

23/7/19

ತಿಳಿಸಿದರು. ಹಾಗೆಯೇ ಈ ವಿಶ್ವವಿದ್ಯಾಲಯದಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕ ಹೊಂದಿರುವ ಪ್ರೊ: ಎಂ. ರಾಮಚಂದ್ರಗೌಡ ಅವರು ಈ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರಿಗೆ ಅಭಿನಂದನೆಗಳನ್ನು ವ್ಯಕ್ತಪಡಿಸಿದರು. ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತವನ್ನು ಕೋರಿದರು. ಆನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ– 1**: ದಿನಾಂಕ 19.01.2019 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆ, ದಿನಾಂಕ 28.02.2019, 29.05.2019 ಹಾಗೂ 31.05.2019 ಮತ್ತು 27.06.2019ರಂದು ಜರುಗಿದ ವಿಶೇಷ ಸಭೆಗಳ ನಡಾವಳಿಗಳನ್ನು ಧೃಢೀಕರಿಸುವ ಕುರಿತು.

ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿಯವರು ದಿನಾಂಕ 27.06.2019ರ ಸಿಂಡಿಕೇಟ್ ವಿಶೇಷ ಸಭೆಯ ವಿಷಯ ಸೂಚಿ 2ರ ಕುರಿತಂತೆ ನೀಡಿದ ಅಸಮ್ಮತಿ ಪತ್ರ ಕುರಿತು ವಿಶ್ವವಿದ್ಯಾಲಯ ನೀಡಿರುವ ಪತ್ರದ ಬಗ್ಗೆ ಪ್ರಸ್ತಾಪಿಸಿದರು.

ಕುಲಪತಿಗಳು ಸಂಬಂಧಿಸಿದ ಪರಿನಿಯಮಾವಳಿಯನ್ನು ಸಭೆಯ ಗಮನಕ್ಕೆ ತಂದರು. ಸದರಿ ಪರಿನಿಯಮಾವಳಿಗಳ ಅನುಸಾರ ಮಾನ್ಯ ಸದಸ್ಯರಿಗೆ ಪತ್ರ ಬರೆಯಲಾಗಿದೆ. ಆ ಪತ್ರಕ್ಕೆ ಅವರು ಪ್ರತಿಕ್ರಿಯೆ ನೀಡಬಹುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಹೆಚ್. ಆರ್, ಸತೀಶ ರವರು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರ ಹೆಸರುಗಳನ್ನು ನಡಾವಳಿಗಳಲ್ಲಿ ನಮೂದಿಸದೇ ಇರುವ ಕುರಿತು ಪ್ರಾಸ್ತಾಪಿಸಿದರು. ಕುಲಪತಿಗಳು, ಪರಿನಿಯಮಾವಳಿಯನ್ನು ಉಲ್ಲೇಖಿಸಿ, ಅದರಂತೆ, ಚರ್ಚೆಯ ಸಾರಾಂಶಗಳನ್ನು ಮಾತ್ರ ನಮೂದಿಸಿ ತೀರ್ಮಾನಗಳನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು. ಪ್ರಮುಖ ವಿಷಯಗಳ ಕುರಿತು ಚರ್ಚೆಯಾದಾಗ, ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರ ಹೆಸರು ನಮೂದಿಸುವುದು ಸೂಕ್ತವೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಮುಖ ವಿಷಯಗಳ ಚರ್ಚೆಯಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡಿದ ಸದಸ್ಯರ ಹೆಸರನ್ನು ನಡಾವಳಿಗಳಲ್ಲಿ ನಮೂದಿಸಲು ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ದಿನಾಂಕ 19.01.2019 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆ, ದಿನಾಂಕ 28.02.2019, 29.05.2019 ಹಾಗೂ 31.05.2019 ಮತ್ತು 27.06.2019 ರಂದು ಜರುಗಿದ ವಿಶೇಷ ಸಭೆಗಳ ನಡಾವಳಿಗಳನ್ನು ಮೇಲಿನ ಅಭಿಪ್ರಾಯಗಳಿಗೆ ಒಳಪಟ್ಟು ಧೃಢೀಕರಿಸಲಾಯಿತು.

23/8/19

**ಷಯ ಸಂಖ್ಯೆ–2:** ದಿನಾಂಕ 19.01.2019 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆ, ದಿನಾಂಕ 28.02.2019, 29.05.2019 ಹಾಗೂ 31.05.2019 ಮತ್ತು 27.06.2019 ರಂದು ಜರುಗಿದ ವಿಶೇಷ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿ

**ಸಿಂಡಿಕೇಟ್ ನಿರ್ಣಯ:**

1. 19.01.2019ರ ಸಿಂಡಿಕೇಟ್ ನಡಾವಳಿಯ ವಿಷಯ ಸಂಖ್ಯೆ 18ರ ಕುರಿತಂತೆ ಸದಸ್ಯರಾದ ಶ್ರೀ ಹೆಚ್. ಸತೀಶ್ ಹಾಗೂ ಡಾ: ಹೆಚ್.ಟಿ. ಅರವಿಂದ ರವರು ಪ್ರಸ್ತಾಪಿಸಿ, ಅಂದಿನ ಸಭೆಯಲ್ಲಿ ತಾವು 2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಕೋರಿದ್ದಾಗಿ ತಿಳಿಸಿದರು. ಆದರೆ ಕೈಕೊಂಡ ಕ್ರಮದ ವರದಿಯ ಜೊತೆಗೆ ಒದಗಿಸಿರುವ ಪಟ್ಟಿಯಲ್ಲಿ ಕಾಮಗಾರಿ ಸೇರಿದಂತೆ ವಿವಿಧ ವೆಚ್ಚದ ವಿವರಗಳನ್ನು ನೀಡಿದ್ದು, ಸದರಿ ಪಟ್ಟಿಯಲ್ಲಿ ಅಧಿಕಾರಿಗಳ ಉಪಯೋಗಕ್ಕೆ ಹೊಸ ವಾಹನಗಳನ್ನು ಖರೀದಿ ಮಾಡಿದ ನಂತರದ ಅವಧಿಯಲ್ಲಿ ವಾಹನ ಬಾಡಿಗೆ ಕುರಿತು ವೆಚ್ಚಗಳನ್ನು ತೋರಿಸಲಾಗಿದೆ ಎಂದು ತಿಳಿಸಿ, ಇದೂ ಸೇರಿದಂತೆ ತಾವು ಕೋರಿರುವ ವೆಚ್ಚದ ವಿವರಗಳನ್ನು ನೀಡುವಂತೆ ಕೋರಿದರು. ಕುಲಪತಿಗಳು ಈ ಕುರಿತು ಸದಸ್ಯರು ಕೇಳಿದ ಮಾಹಿತಿಯನ್ನು ಸಿದ್ಧಪಡಿಸಿ ಒದಗಿಸಲು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.

2. ದಿನಾಂಕ 27.06.2019 ರ ಸಿಂಡಕೇಟ್ ನಡಾವಳಿ ವಿಷಯ ಸಂಖ್ಯೆ 3ರ ಕುರಿತಂತೆ 70 ವರ್ಷ ವಯಸ್ಸು ಪೂರೈಸಿರುವ ಸಂಚಿತ ವೇತನದ ನಿವೃತ್ತ ಸಿಬ್ಬಂದಿಗಳನ್ನು ಸೇವಾ ಮುಕ್ತ ಗೊಳಿಸುವ ತೀರ್ಮಾನ ಕುರಿತಂತೆ ಯಾವುದೇ ಮಾಹಿತಿ ನೀಡಿರುವುದಿಲ್ಲವೆಂದು ತಿಳಿಸಿದರು. ಕುಲಪತಿಗಳು ಸದ್ಯಕ್ಕೆ ಅವರ ಸೇವೆ ಮುಂದುವರಸಲಾಗಿದೆ ಇಂತಹ 3 ಸಿಬ್ಬಂದಿಗಳನ್ನು ಗುರುತಿಸಲಾಗಿದ್ದು, ಆದಷ್ಟು ಬೇಗ ಪರ್ಯಾಯ ಸಿಬ್ಬಂದಿಗಳನ್ನು ಗುರುತಿಸಿ, ಇವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುವುದೆಂದು ಹಾಗೂ ಈ ಕುರಿತು ಮುಂದಿನ ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

3. ದಿನಾಂಕ 27.06.2019ರ ನಡಾವಳಿಯಲ್ಲಿ ವಿಷಯ ಸಂಖ್ಯೆ 6 ಕುರಿತಂತೆ ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ ಅವರು ಹೊರಗುತ್ತಿಗೆ ಹಾಗೂ ಉದ್ಯಾನ ಕೆಲಸಗಾರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡುವ ಕುರಿತು ತೀರ್ಮಾನವಾಗಿದ್ದು, ಆ ಕುರಿತು ವಿವರಣೆ ಬಯಸಿದರು. ಕುಲಪತಿಗಳು ಸಕಾರಾತ್ಮಕವಾಗಿ ಸ್ಪಂದಿಸಿ, ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡುವ ಕುರಿತು ಈ ಕೆಳಕಂಡ ಸದಸ್ಯರ ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು:

    1. ಕುಲಸಚಿವರು .. ಅಧ್ಯಕ್ಷರು
    2. ಕುಲಸಚಿವರು(ಮೌಲ್ಯಮಾಪನ) .. ಸದಸ್ಯರು
    3. ಹಣಕಾಸು ಅಧಿಕಾರಿಗಳು .. ಸದಸ್ಯರು

23/7/19

ಸಭೆ ಕುಲಪತಿಗಳ ಪ್ರಸ್ತಾವನೆಗೆ ಅನುಮೋದನೆ ಸೂಚಿಸಿ ಸದರಿ ಸಮಿತಿ, ಸರ್ಕಾರ ನಿಗದಿ ಪಡಿಸಿದ ಕನಿಷ್ಠ ವೇತನ ಹಾಗೂ ಸದರಿ ಸಿಬ್ಬಂದಿಗಳ ಹೊರಗುತ್ತಿಗೆ ನೇಮಕಾತಿ ವಿಧಿ ವಿಧಾನಗಳನ್ನು ಕುರಿತು ಮುಂದಿನ ಸಿಂಡಿಕೇಟ್ ಸಭೆಗೆ ವರದಿ ಸಲ್ಲಿಸಲು ಸಭೆ ಅನುಮೋದನೆ ನೀಡಲಾಯಿತು.

ಮೇಲೆ ನಮೂದಿಸಿದ ಬದಲಾವಣೆಗಳಿಗೆ ಒಳಪಟ್ಟು ದಿನಾಂಕ 19.01.2019 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆ, ದಿನಾಂಕ 28.02.2019, 29.05.2019 ಹಾಗೂ 31.05.2019 ಮತ್ತು 27.06.2019 ರಂದು ಜರುಗಿದ ವಿಶೇಷ ಸಭೆಗಳ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ-3:** Signing of MoU by Bengaluru Central University (BCU) with Confederation of Indian Industry (CII)

**ಸಿಂಡಿಕೇಟ್ ನಿರ್ಣಯ:**

ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳ ಕೌಶಲ್ಯ ಸುಧಾರಣೆ ಕುರಿತಂತೆ Confederation of Indian Industry (CII) ಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರವನ್ನು ಗಮನಿಸಿ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ-4:** Appointment of Finance Officer to Bengaluru Central University (BCU)

**ಸಿಂಡಿಕೇಟ್ ನಿರ್ಣಯ:**

ಶ್ರೀ ವಿ.ಡಿ. ನಿಶ್ಚಿತ್ ಅವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯಾಗಿ ನೇಮಕಾತಿ ಹೊಂದಿ ವರದಿ ಮಾಡಿಕೊಂಡಿರುವುದನ್ನು ಸಭೆ ಗಮನಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ-5:** Appointment of Co-ordinators for the newly started 4 Post Graduate Departments and payment of honorariums

ಕುಲಪತಿಗಳು ಹೊಸ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸಲು ಕೈಗೊಂಡ ಕ್ರಮಗಳ ಕುರಿತು ವಿವರಣೆ ನೀಡಿದರು. ಈಗಾಗಲೇ ಭೌತಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳು ಒಳಗೊಂಡಂತೆ ಸ್ನಾತಕೋತ್ತರ ವ್ಯಾಸಂಗಗಳಿಗೆ ಪ್ರವೇಶಕ್ಕೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿರುವುದನ್ನು ಸಭೆಗೆ ತಿಳಿಸಿದರು. Environmental & Climate Change ಮತ್ತು Urban Studies and Planning ವಿಷಯಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಕ್ರಮ ಕೈಕೊಳ್ಳಲಾಗುವುದೆಂದು ತಿಳಿಸಿದರು. ಈ ವಿಭಾಗಗಳ ಪ್ರಾರಂಭಕ್ಕೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲು ಸಂಯೋಜಕರ ಅಗತ್ಯವಿದೆ ಎಂದು ತಿಳಿಸಿದರು.

28/7/19

ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ ಯವರು ಬೇಡಿಕೆ ಇರುವ ಮನ:ಶಾಸ್ತ್ರ, ಶಿಕ್ಷಣ, ದೈಹಿಕ ಶಿಕ್ಷಣ ಇತ್ಯಾದಿ ವಿಷಯಗಳನ್ನು ಪ್ರಾರಂಭಿಸಲು ಕ್ರಮ ಕೈಕೊಳ್ಳಬೇಕೆಂದರು. ಯುವಕರನ್ನು ವಿಭಾಗಗಳ ಸಂಯೋಜಕರಾಗಿ ನೇಮಕ ಮಾಡಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು Environmental & Climate Change ಹೊರತುಪಡಿಸಿ ಉಳಿದ ವಿಭಾಗಗಳ ಪ್ರಾರಂಭಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿ, ಅನುಭವಿ ಯುವಕರು ಲಭ್ಯವಾದಲ್ಲಿ ಪರಿಗಣಿಸಬಹುದೆಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಅ) ಹೊಸದಾಗಿ ಪ್ರಾರಂಭಿಸಲಾದ ಸ್ನಾತಕೋತ್ತರ ವಿಭಾಗಗಳಿಗೆ ಸಂಯೋಜಕರನ್ನು ನೇಮಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಆ) ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ಪ್ರತಿ ಗಂಟೆಗೆ ರೂ.1250/- ರಂತೆ ತಿಂಗಳಿಗೆ ಗರಿಷ್ಠ ರೂ.50,000/-ಗಳಿಗೆ ಸೀಮಿತಗೊಳಿಸಿ ಪಾವತಿಸಲು ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

ಇ) ಸಂಯೋಜಕರಿಗೆ ಗರಿಷ್ಠ ಮೊತ್ತವನ್ನು ರೂ.50,000/- ಹಾಗೂ ಭತ್ಯ ರೂ.10,000/- ಸೇರಿ ಒಟ್ಟು ರೂ.60,000/- ಗಳನ್ನು ಪಾವತಿಸಲು ಅನುಮೋದನೆ ನೀಡಲಾಯಿತು.

ಈ) ಮುಂದಿನ ಶೈಕ್ಷಣಿಕ ಸಾಲಿಗೆ ಪ್ರಾರಂಭಿಸಬೇಕಾದ ಹೊಸ ವಿಭಾಗಗಳನ್ನು ಗುರುತಿಸಲು ಒಂದು ತಜ್ಞರ ಸಮಿತಿ ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ-6:** Establishment of PG Department of Law & Public Policy

ರಾಷ್ಟ್ರೀಯ ಕಾನೂನು ಶಾಲೆ (National Law School of India University-NLSIU) ದಲ್ಲಿ ಪ್ರತಿವರ್ಷ ಕರ್ನಾಟಕದಿಂದ ಸರಾಸರಿ 3-4 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆಯುತ್ತಿರುವುದನ್ನು ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ನಗರದ ಹೃದಯ ಭಾಗದಲ್ಲಿದ್ದು, ಕರ್ನಾಟಕ ಉಚ್ಚನ್ಯಾಯಾಲಯ, ಸಿವಿಲ್ ಕೋರ್ಟ್, ಆಡಳಿತ ನ್ಯಾಯಮಂಡಳಿ, ಕಾನೂನು ಸಂಸ್ಥೆಗಳು (Law Firms) ವಿಶ್ವವಿದ್ಯಾಲಯದ ಸುತ್ತಮುತ್ತಲೂ ಇರುವುದರ ಪ್ರಯೋಜನ ಪಡೆದು ನ್ಯಾಷನಲ್ ಲಾ ಸ್ಕೂಲ್ ಮಾದರಿಯ ಒಂದು ಶಾಲೆ ಪ್ರಾರಂಭಿಸುವ ಅಗತ್ಯವನ್ನು ಸಭೆಗೆ ಮನವರಿಕೆ ಮಾಡಿಕೊಟ್ಟರು. ಬಾರ್ ಕೌನ್ಸಿಲ್ ಆಫ್ ಇಂಡಿಯಾ ದಿಂದ ಮಾನ್ಯತೆ ಇತ್ಯಾದಿ ಪೂರಕ ಸಿದ್ಧತೆಗಳನ್ನು ಮಾಡಲು ಒಬ್ಬ ಅನುಭವಿ ಸಂಯೋಜಕರನ್ನು ನೇಮಕಮಾಡುವುದು ಅನಿವಾರ್ಯವಾಗಿದೆ ಎಂದು ತಿಳಿಸುತ್ತಾ, ವಿಶ್ವವಿದ್ಯಾಲಯದಲ್ಲಿ ಯಾವುದೇ ನಿಕಾಯ/ವಿಷಯದ ಘಟಕ ಮಹಾವಿದ್ಯಾಲಯ (Constituent College) ಪ್ರಾರಂಭಿಸಲು ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಕ್ಕೆ ಅಧಿಕಾರವಿರುತ್ತದೆ ಎಂದು ವಿವರಿಸಿದರು.

23/7/19

ಸದಸ್ಯರಾದ ಡಾ:ಎನ್. ನರಸಿಂಹಮೂರ್ತಿ ಅವರು ಇದು ಕಾನೂನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವುದರಿಂದ ಈ ವಿಶ್ವವಿದ್ಯಾಲಯ ಪ್ರಾರಂಭಿಸುವ ಕುರಿತು ಸಂದೇಹ ವ್ಯಕ್ತಪಡಿಸಿದರು. ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ರವರು ವಿವರಣೆ ನೀಡುತ್ತಾ, ಕಾನೂನು ನಿಕಾಯಕ್ಕೆ ಸಂಬಂದಿಸಿದ ಸ್ನಾತಕೋತ್ತರ ವಿಷಯಗಳನ್ನು ವಿಶ್ವವಿದ್ಯಾಲಯ ಪ್ರಾರಂಭಿಸ ಬಹುದು ಎಂದು ತಿಳಿಸಿದರು. ಆದರೆ ಕಾನೂನು ಮಹಾವಿದ್ಯಾಲಯಗಳ ಸಂಯೋಜನೆ ನೀಡುವ ಅಧಿಕಾರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಮಾತ್ರ ಇದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

2020-21 ನೇ ಸಾಲಿನಿಂದ Law & Public Policy ಸ್ನಾತಕೋತ್ತರ ವಿಭಾಗ ಪ್ರಾರಂಭಿಸಲು ಅನುಮತಿ ನೀಡಲಾಯಿತು. ಈ ಕುರಿತು ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲು ಒಬ್ಬ ಅನುಭವಿ ಸಂಯೋಜಕರನ್ನು ನೇಮಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ-7:** ದಿನಾಂಕ 08.07.2019 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ಪ್ರಥಮ ಸಭೆಯ ನಡಾವಳಿಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

ದಿನಾಂಕ 08.07.2019 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ಸಭೆಯ ನಡಾವಳಿಗಳನ್ನು ಕುಲಸಚಿವರು (ಮೌಲ್ಯಮಾಪನ) ರವರು ಸಭೆಯಲ್ಲಿ ಮಂಡಿಸಿದರು.

**ಸಿಂಡಿಕೇಟ್ ನಿರ್ಣಯ:**

ನಡಾವಳಿಗಳನ್ನು ವಿವರವಾಗಿ ಪರಿಶೀಲಿಸಿ, ನಡಾವಳಿಗಳಲ್ಲಿ ಕಲವು ವಿಷಯಗಳು ಪುನರುಕ್ತಿಯಾಗಿರುವುದನ್ನು ಸಭೆ ಗಮನಿಸಿತು. ನಡಾವಳಿಗಳನ್ನು ನಾಲ್ಕು ವಿಭಾಗಗಳಲ್ಲಿ (1) ಕ್ರೀಡಾ ಕಿಟ್ ಹಾಗೂ ಕ್ರೀಡಾ ಚಟುವಟಿಗಳಿಗಾಗಿ ನೀಡಲು ಪ್ರಸ್ತಾಪಿಸಿರುವ ಶೂ, ಟೈ, ಬ್ಲೇಜರ್, ಕ್ರೀಡಾಪಟುಗಳಿಗೆ ನೀಡಲು ಪ್ರಸ್ತಾಪಿಸಿರುವ ಭತ್ಯ ಇತ್ಯಾದಿ (2) ಅಂತರ ಕಾಲೇಜು ಕ್ರೀಡಾ ಕೂಟ (3) ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟ, (4) 50 ಕ್ರೀಡೆಗಳಿಗಾಗಿ ವೆಚ್ಚ ಇತ್ಯಾದಿ ವಿಂಗಡಿಸಿ, ವಿಶ್ವವಿದ್ಯಾಲಯ ಅನುಮೋದಿಸಿದ ಆಯವ್ಯಯದ ಅವಕಾಶವನ್ನು ನಮೂದಿಸಿ ವಿವರಗಳನ್ನು ಕುಲಸಚಿವರು (ಮೌಲ್ಯಮಾಪನ) ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿ, ಅನುಮೋದನೆಗೆ ಪಡೆಯಬೇಕೆಂದು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ-8:** Press Report in the Bangalore Mirror issues dated 3rd & 4th July 2019 regarding collection of MBA admission fee

ಕುಲಪತಿಗಳು ವಿಷಯವನ್ನು ಪ್ರಸ್ತಾಪಿಸಿ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ Canara Bank School of Management Studies ನಲ್ಲಿ- MBA ಪ್ರವೇಶಗಳಿಗೆ ಪ್ರತಿವರ್ಷ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ PGCET ಮೂಲಕ ಪ್ರವೇಶ ನೀಡಲಾಗುತ್ತದೆ. ಈ ಪ್ರಕ್ರಿಯೆ ನಂತರ ಉಳಿದ ಸೀಟುಗಳಿಗೆ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಸಿ ವಿದ್ಯಾರ್ಥಿಗಳ ಪ್ರವೇಶ ನೀಡಲಾಗುತ್ತದೆ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ CBSMS (Canara Bank School of Management Studies) ನಲ್ಲಿ ರೆಗುಲರ್

ಮತ್ತು ಸಂಜೆ ವ್ಯಾಸಂಗಗಳಿದ್ದು, ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ನಡೆಸಿ ಅರ್ಹತೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ.

CBSMS ನಲ್ಲಿ ಸಹಾಯಕನಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಶಿವಶಂಕರ ಭೈರವ, ಅವರು 2018-19ನೆ ಸಾಲಿನಲ್ಲಿ ಕೆಲವು ವಿದ್ಯಾರ್ಥಿಗಳಿಂದ ಶುಲ್ಕವನ್ನು ನಗದು ರೂಪದಲ್ಲಿ ಸ್ವೀಕರಿಸಿರುವುದು ವಿಶ್ವವಿದ್ಯಾಲಯದ ಗಮನಕ್ಕೆ ಬಂದಿರುವುದಾಗಿ ತಿಳಿಸಿದರು.

CBSMS ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ: ಕೆ. ಜನಾರ್ಧನಮ್ ರವರು ವರ್ಗಾವಣೆ ಪ್ರಕ್ರಿಯೆ ಅಡಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಳಿದು ಕೊಂಡಿದ್ದು ನಂತರದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ)ರಾಗಿ ನೇಮಕ ಹೊಂದಿರುವುದರಿಂದ, CBSMS ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ: ಎಂ. ನಿರ್ಮಲಾ ರವರನ್ನು ಸಂಯೋಜಕರಾಗಿ ದಿನಾಂಕ 11.03.2019 ರಂದು ನೇಮಕ ಮಾಡಲಾಗಿದೆ. ಇವರು ಸಂಯೋಜಕಾಗಿ ಅಧಿಕಾರ ವಹಿಸಿಕೊಂಡ ನಂತರ ಕಳೆದ ವರ್ಷದ ಸಂಜೆ ಕೋರ್ಸಿನ ಪ್ರವೇಶ ದಾಖಲಾತಿ ಹಾಗೂ ಶುಲ್ಕ ಸಂದಾಯ ಮಾಡಿದ ವಿವರಗಳು ಕಛೇರಿಯಲ್ಲಿ ಲಭ್ಯವಿಲ್ಲವೆಂದು ತಿಳಿಸಿದ್ದಾರೆ. ನಂತರ ಡಾ. ಕೆ. ಜನಾರ್ಧನಮ್ ಅವರಿಗೆ ಪತ್ರ ಬರೆದು ಎಲ್ಲಾ ದಾಖಲೆಗಳನ್ನು ಹೊಸ ಸಂಯೋಜಕರಿಗೆ ಹಸ್ತಾಂತರ ಮಾಡಲು ಸೂಚಿಸಲಾಯಿತು. ಇದಕ್ಕೆ ಉತ್ತರವಾಗಿ ಡಾ: ಕೆ. ಜನಾರ್ಧನಮ್ ರವರು, ಶ್ರೀ ಶಿವಶಂಕರ ಭೈರವ, ಸಹಾಯಕರು ಆಸ್ಪತ್ರೆಗೆ ದಾಖಲಾಗಿರುವುದರಿಂದ ಏಳು ದಿನಗಳ ಕಾಲಾವಕಾಶ ಕೋರಿದರು. ನಂತರ ಅವರಿಗೆ ಅಂತಿಮ ನೋಟಿಸ್ ನೀಡಲಾಗಿದೆ, ಡಾ. ಕೆ. ಜನಾರ್ಧನಮ್ ಅವರು ಕೇಂದ್ರಕ್ಕೆ ಆಗಮಿಸಿ, ದಾಖಲೆಗಳನ್ನು ಹಸ್ತಾಂತರ ಮಾಡಿರುತ್ತಾರೆ ಹಾಗೂ ಶ್ರೀ ಶಿವಶಂಕರ ಭೈರವರು ನಗದು ರೂಪದಲ್ಲಿ ಸ್ವೀಕರಿಸಿದ ಶುಲ್ಕದ ಹಣವನ್ನು ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದಿಲ್ಲ ಎಂದು ತಮ್ಮ ದಿನಾಂಕ 11.07.2019 ಪತ್ರದ ಮೂಲಕ ತಿಳಿಸಿರುತ್ತಾರೆ.

ಈ ಹಂತದಲ್ಲಿ ಮುಂದಿನ ಕ್ರಮ ಕೈಕೊಳ್ಳುವ ಕುರಿತು ಕಾನೂನು ಅಭಿಪ್ರಾಯ ಪಡೆಯಲಾಗಿದೆ. ಅದರ ಪ್ರಕಾರ ಶ್ರೀ ಶಿವಶಂಕರ ಭೈರವ, ಸಹಾಯಕರು, ಇವರ ವಿರುದ್ಧ ಹಣ ದುರುಪಯೋಗ ಪಡಿಸಿಕೊಂಡ ಆರೋಪದ ಬಗ್ಗೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗುತ್ತದೆ ಅಲ್ಲದೆ ವಿಶ್ವವಿದ್ಯಾಲಯದ ನೌಕರರಾಗಿ ಯಾರು ಯಾರು ಕರ್ತವ್ಯ ಲೋಪವೆಸಗಿದ್ದಾರೆ ಎನ್ನುವದನ್ನು ವಿಚಾರಣೆಯಿಂದ ತಿಳಿಯಬೇಕಾಗಿದೆ ಎಂದು ತಿಳಿಸಿ ಇಲಾಖಾ ವಿಚಾರಣೆ ನಡೆಸಲು ಸಲಹೆ ನೀಡಿದ್ದಾರೆ.
ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನಿಸಿತು.

**ಸಿಂಡಿಕೇಟ್ ನಿರ್ಣಯ:**

1. CBSMS ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಸ್ವೀಕರಿಸಲಾದ ಶುಲ್ಕದ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶ್ರೀ ಶಿವಶಂಕರ ಭೈರವ ಇವರ ವಿರುದ್ಧ ಪ್ರಕರಣವನ್ನು ಹಲಸೂರು ಗೇಟ್ ಪೋಲೀಸ್ ಠಾಣೆಯಲ್ಲಿ ದಾಖಲಿಸಿ ಅಗತ್ಯ ತನಿಖೆ ಹಾಗೂ ಕಾನೂನು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

2. ಒಟ್ಟಾರೆ ಪ್ರಕರಣ ಕುರಿತಂತೆ ಆಂತರಿಕ ವಿಚಾರಣೆ ನಡೆಸಲು ಕೆಳಕಂಡ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

    1) ಕುಲಸಚಿವರು .. ಅಧ್ಯಕ್ಷರು
    2) ಹಣಕಾಸು ಅಧಿಕಾರಿಗಳು .. ಸದಸ್ಯರು
    3) ಶ್ರೀ ಅರವಿಂದ ಹೆಚ್.ಟಿ. .. ಸದಸ್ಯರು
    4) ಡಾ: ಎನ್. ನರಸಿಂಹಮೂರ್ತಿ.. ಸದಸ್ಯರು

5) ಡಾ: ಆಶಾ ಗಣೇಶ್ .. ಸದಸ್ಯರು.

ಸದರಿ ಸಮಿತಿ ಪ್ರವೇಶ ಪ್ರಕ್ರಿಯೆ ಸೇರಿ ಈ ಪ್ರಕರಣ ಕುರಿತಂತೆ ವಿಚಾರಣೆ ನಡೆಸಿ ಒಂದು ತಿಂಗಳಲ್ಲಿ ವರದಿ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

ಮೇಲೆ ನಮೂದಿಸಿದ ಸಮಿತಿ ವಿಶ್ವವಿದ್ಯಾಲಯದ ಸಿ.ಬಿ.ಎಸ್.ಎಂ.ಎಸ್. ಸೇರಿದಂತೆ ಇತರ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವೇಶ ಪ್ರಕ್ರಿಯೆ ಹಾಗೂ ಸ್ವೀಕರಿಸಲಾದ ಶುಲ್ಕದ ವಿವರಗಳನ್ನೂ ಪರಿಶಿಲೀಸಿ ವಿಶ್ವವಿದ್ಯಾಲಯದ ಆಡಳಿತ ಸುಧಾರಣೆಗೆ ಸಲಹೆ ಸೂಚನೆಗಳನ್ನು ನೀಡಲು ಸೂಚಿಸಲಾಯಿತು.

ವಿಚಾರಣಾ ಸಮಿತಿಯ ವರದಿ ಸ್ವೀಕರಿಸಿದ ನಂತರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಮುಂದಿನ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ–9:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕಾನೂನು ವಿಷಯಗಳಿಗೆ ವಕೀಲರ ತಂಡಕ್ಕೆ ವಕೀಲರ ಹೆಸರುಗಳನ್ನು ಪರಿಗಣಿಸುವ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

ಪ್ರಸ್ತಾವನೆಯಲ್ಲಿ ನಮೂದಿಸಿರುವ ಕೆಳಕಂಡ ನ್ಯಾಯವಾದಿಗಳನ್ನು ವಿಶ್ವವಿದ್ಯಾಲಯದ ಪರವಾಗಿ ವಿವಿಧ ನ್ಯಾಯಾಲಯಗಳಲ್ಲಿ ವಾದ ಮಂಡಿಸಲು ನ್ಯಾಯವಾದಿಗಳಾಗಿ ನೇಮಕ ಮಾಡಲು ಅನುಮೋದನೆ ನೀಡಲಾಯಿತು:

1. ಶ್ರೀ. ಹೆಚ್.ವಿ. ಮಂಜುನಾಥ
2. ಶ್ರೀ ಆರ್. ಮಂಜುನಾಥ್
3. ಶ್ರೀ ನಿತೀನ್ ರಮೇಶ್
4. ಶ್ರೀ ಎಂ. ಐ. ಅರುಣ್

ಹಿರಿಯ ನ್ಯಾಯವಾದಿಗಳಾದ ಶ್ರೀ ರವಿವರ್ಮ ಕುಮಾರ್ ರವರನ್ನು ವಿಶ್ವವಿದ್ಯಾಲಯದ ಹಿರಿಯ ನ್ಯಾಯವಾದಿಗಳಾಗಿ ನೇಮಕ ಮಾಡಲು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾದ ಶ್ರೀ ಜಿ.ಕೆ. ಬೋರೆಗೌಡ ರಿಂದ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಅಗತ್ಯವಿರುವಾಗ ಕಾನೂನು ಸಲಹೆ ಪಡೆಯಲು ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ–10:** ಸರ್ಕಾರಿ ಆರ್.ಸಿ. ಕಾಲೇಜು ಎಂ.ಕಾಂ ವಿದ್ಯಾರ್ಥಿಗಳಿಗೆ ಅಂತರಿಕ ಅಂಕಗಳನ್ನು ನೀಡಿರುವ ಕುರಿತು ಸ್ವೀಕರಿಸಿರುವ ದೂರು ಬಗ್ಗೆ

ಕುಲಸಚಿವರು (ಮೌಲ್ಯಮಾಪನ)ರವರು ಪ್ರಕರಣದ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು. ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಪರಿಶೀಲನೆ ನಡಿಸಿ ವರದಿ ಸಲ್ಲಿಸಲು ಸೂಚಿಸಿರುವುದಾಗಿ ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಸಭೆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಈ ಕುರಿತು ಸರ್ಕಾರಿ ಆರ್.ಸಿ. ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಬೇಕೆಂದು ಮತ್ತು ಈ ಕುರಿತು ಪರಿಶೀಲಿಸಿ ವರದಿ ನೀಡಲು ಕೆಳಕಂಡ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು:

23/7/19

1. ಕುಲಸಚಿವರು (ಮೌಲ್ಯಮಾಪನ)
2. ಡಾ: ಎನ್. ನರಸಿಂಹಮೂರ್ತಿ
3. ಶ್ರೀ. ಹೆಚ್.ಆರ್. ಸತೀಶ್

**ವಿಷಯ ಸಂಖ್ಯೆ-11:** 4 ವರ್ಷಗಳ Integrated B.A,B.Ed ಮತ್ತು B.Sc,B.Ed ವ್ಯಾಸಂಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಬಿಸಲು ಕ್ರಮ ಕೈಕೊಂಡ ಕುರುತು

2020-21 ನೇ ಸಾಲಿಗೆ 4 ವರ್ಷಗಳ Integrated B.A,B.Ed ಮತ್ತು B.Sc,B.Ed ವ್ಯಾಸಂಗಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿ ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಆಸಕ್ತ ಕಾಲೇಜುಗಳಿಂದ ಅರ್ಜಿಗಳನ್ನು ಅಹ್ವಾನಿಸಿರುವ ಕುರಿತು ಸಭೆಗೆ ವಿವರಿಸಿದರು. ಅರ್ಜಿಸಲ್ಲಿಸಿರುವ ಕಾಲೇಜುಗಳ ತನಿಖೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿ, ಅವುಗಳು ಸಲ್ಲಿಸುವ ವರದಿಗಳನ್ನು ಪ್ರಾಧಿಕಾರಗಳ ಮುಂದೆ ಮಂಡಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ, ಈ ಎಲ್ಲಾ ಪ್ರಕ್ರಿಯೆಗಳನ್ನು ದಿನಾಂಕ 26.07.2019ರ ಒಳಗೆ ಮುಗಿಸಬೇಕಾಗಿದೆ ಎಂದು ತಿಳಿಸಿದರು. ಈ ಕಾರಣದಿಂದಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ, ಅವುಗಳು ಸಲ್ಲಿಸುವ ವರದಿಯನ್ನು ಪ್ರಾಧಿಕಾರಗಳ ಪರವಾಗಿ ಅನುಮೋದಿಸಿ ಸರ್ಕಾರಕ್ಕೆ ಸಲ್ಲಿಸಲು ಕುಲಪತಿಗಳಿಗೆ ಅಧಿಕಾರ ನೀಡಬೇಕಾಗುತ್ತದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

4 ವರ್ಷಗಳ Integrated B.A,B.Ed ಮತ್ತು B.Sc,B.Ed ವ್ಯಾಸಂಗಗಳ ಕುರಿತಂತೆ ಸ್ಥಳಿಯ ವಿಚಾರಣಾ ಸಮಿತಿಗಳನ್ನು ರಚಿಸಲು ಹಾಗೂ ಸದರಿ ಸಮಿತಿಗಳು ಸಲ್ಲಿಸುವ ವರದಿಗಳನ್ನು ಪರಿಗಣಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕೆಳಕಂಡ ವಿಷಯಗಳ ಕುರಿತು ಕುಲಪತಿಗಳು ಸಿಂಡಿಕೇಟಿಗೆ ಮಾಹಿತಿ ಒದಗಿಸಿದರು

1. ಪಿ.ಹೆಚ್‌ಡಿ ಪ್ರವೇಶ ಪರೀಕ್ಷೆಗಳನ್ನು ದಿನಾಂಕ 14.07.2019 ಭಾನುವಾರ ರಂದು ಯಶಸ್ವಿಯಾಗಿ ಜರುಗಿಸಿರುವುದನ್ನು ತಿಳಿಸಿದರು. ಕಲಾ ನಿಕಾಯದ ಡೀನರಾದ ಡಾ:ಎನ್. ನರಸಿಂಹಮೂರ್ತಿಯವರು ಮುಖ್ಯ ಸಂಯೋಜಕರಾಗಿ ಪ್ರಶಂಸನೀಯವಾದ ಕೆಲಸ ಮಾಡಿದ್ದಾರೆ ಎಂದು ತಿಳಿಸಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಇವರ ಜೊತೆಗೆ ನಿಕಾಯದ ಡೀನರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸ್ತುತ್ಯಾರ್ಹವಾದ ಕೆಲಸ ಮಾಡಿದ್ದಾರೆ ಎಂದು ತಿಳಿಸಿ ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸಿದರು.

23/7/19

2. ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನವನ್ನು ದಿನಾಂಕ 13.08.2019 ರಂದು ಆಚರಿಸಲಾಗುತ್ತಿದೆ ಎಂದು ತಿಳಿಸಿ, ಗೌರವಾನ್ವಿತ ಕುಲಾಧಿಪತಿಗಳ ಉಪಸ್ಥಿತಿಗಾಗಿ ಮತ್ತು ಖ್ಯಾತ ಕ್ರಿಕೆಟ್ ಆಟಗಾರರಾದ ಶ್ರೀ ರಾಹುಲ್ ದ್ರಾವಿಡ್ ಅವರನ್ನು ಮುಖ್ಯ ಅತಿಥಿಗಳಾಗಿ ಆಗಮಿಸಲು ಕೋರಿರುವುದಾಗಿ ತಿಳಿಸಿದರು. ಕಾರ್ಯಕ್ರಮದ ವಿವರಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಡಾ: ಎನ್. ನರಸಿಂಹಮೂರ್ತಿ ಅವರು ಯು.ಜಿ.ಸಿ ಅಧ್ಯಕ್ಷರನ್ನು ಸಹ ಆಮಂತ್ರಿಸಬೇಕೆಂದು ತಿಳಿಸಿದರು. ಇದಕ್ಕೆ ಕುಲಪತಿಗಳು ಸಹಮತ ವ್ಯಕ್ತಪಡಿಸಿದರು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
**ಕುಲಸಚಿವರು**

ಸಹಿ/–
**ಕುಲಪತಿಗಳು**

23/7/19

**ಕುಲಸಚಿವರು**
**ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ**